doc-206
T-P-2

Regd No M 1299 34 th Year ತಾ|| 6—6—51

SATYAVADI

ಸಂಸ್ಥಾಪಕರು- ಆದಮನೆ ಸಿರಸ್ತೆದಾರ್ ಎ೦. ವಿ. ಸುಬಕ್ರಯ್ಯರು [ಬಿಡಿ ಪ್ರತಿ 3 ಪೈ

ಖೋತಾ ಪಡಿತರವನ್ನು ಈಗ ಹೆಚ್ಚಿಸಲು ಸಾಧ್ಯವಿಲ್ಲ

ಅಖಿಲ ಭಾರತ ಹಿಂದೂಧರ್ಮ ಸಂಮೇಳನ

(ಸ್ವಂತ ಸ೦ದ್ದಿಗಾರರಿಂದ ತಂತಿ)

ಆಬು, ಜೂ೯ 5— ಅಖಿಲ ಭಾರತ ಹಿಂದೂಧರ್ಮ ಸಮ್ಮೇಳನದ ಏಳನೇ ಅಧಿವೇಶನವು ಇದೇ ತಾ || 2 ರಿಂದ 4 ರವರೆಗೆ ಮೌಂಟ್ ಆಬುವಿನಲ್ಲಿರುವ ರಘುನಾಥಜೀ ಮೂರ್ತಿಜೀ ಮಂದಿರದ ಅಂಗಣದಲ್ಲಿ, ಮಹಾತ್ಮಾಜೀ ರಾಮಸೊಬೋಧಜೀ ಯವರ ಪ್ರಯತ್ನದಿಂದ ಅತ್ಯಂತ ವೈಭವವಾಗಿ ನೆರವೇರಿತು.

ಶ್ರೀ ದ್ವಾರಕಾಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸ್ವಾಮಿ ಗಳವರ ಘನ ಅಧ್ಯಕ್ಷತೆಯಲ್ಲಿ ಮೊದಲನೇ ದಿನದ ಕಾರ್ಯಕ್ರಮಗಳು ಉಪಕ್ರಮಗೊಂಡುವು.

ಅಹಮದಾಬಾದಿನ ಶ್ರೀ ಜೋಷಿ ಗಿರಿಜಾ ಶಂಕರರು ಮಂಗಳಾಚರಣೆಯನ್ನು ಮಾಡಿದರು.

ಅಹಮದಾಬಾದಿನ ಸೇಟ್ ಗಿರಿದಾಸ್ ಅಚ್ಚುತಲಾಲರು ಸ್ವಾಗತ ಭಾಷಣ ಮಾಡಿದರು.

ಗುಜರಾತಿನ ನಾನಾ ಸ್ಥಳಗಳಿಂದ ರಾಮರಾಜ್ಯಪರಿಷತ್ತಿನ ಪ್ರತಿನಿಧಿಗಳು ಆಗಮಿಸಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಶ್ರೀ ದ್ವಾರಕಾ ಜಗದ್ಗುರುಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸನಾತನ ಧರ್ಮದ ಹಿರಿಮೆಯನ್ನು ವಿವರಿಸಿದರು ವಕ್ಫ್ ಶಾಸ್ತ್ರಗಳನ್ನು ಗೌರವಿಸಬೇಕು ಹಾಗೂ ಶಾಸ್ತ್ರಗಳಲ್ಲಿ ಹೇಳಿರುವಂತೆ ನಡೆಯಬೇಕು – ಎಂದು ಅಪ್ಪಣೆಯನ್ನು ಇತ್ತರು.

ಪಂಡಿತ್ ರಾಮಚಾಣ್ಣಾನಿಯವರ ಭಾಷಣ ಆದನಂತರ ಮೊದಲನೇ ದಿನದ ಕಾರ್ಯಕ್ರಮಗಳು ಮುಕ್ತಾಯವಾದವು.

ಶ್ರೀ ಮಂಡಲೇಶ್ವರ ಸ್ವಾಮಿ ಶ್ರೀ ಗಂಗೇಶ ಮುಕ್ತಾನಂದಜೀಯವರ ಅಧ್ಯಕ್ಷತೆಯಲ್ಲಿ ಎರಡನೇ ದಿನದ ಕಾರ್ಯಕ್ರಮಗಳು ಪ್ರಾರಂಭವಾದುವು.

ಹಿಂದೂಕೋಡ್ ಮಸೂದೆ ವಿರೋಧಿಸುವ ನಿರ್ಣಯವನ್ನು ಶ್ರೀ ಶಾಸ್ತ್ರಿ ಅನೂಪ್‌ರಾಂಜಿಯವರು ಮಂಡಿಸಿದರು. ಶ್ರೀಮತಿ ಗಂಗಾಬೆ ಪಟೇಲರು ನಿರ್ಣಯವನ್ನು ಬೆಂಬಲಿಸಿದರು.

ಶ್ರೀ ಮುತ್ತುಚಂದ್ ವಕೀಲರು ಮಸೂದೆ ಪರವಾಗಿ ಮಾತನಾಡಿದರು. ದೆಹಲಿಯ ಶ್ರೀ ಶಾಸ್ತ್ರಿ ಚಂದ್ರಶೇಖರಜೀಯವರು ತಮ್ಮ ವಾದವನ್ನು ವಿಜ್ಞಾನ ಹಾಗೂ ತರ್ಕಬದ್ಧವಾಗಿ ತೋರಿಸಿದರು. ಅನಂತರ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

ಸೇಟ್ ಹರಿದಾಸರು ಶಾಸನಪೂರ್ವಕ ಗೋವಧೆ ನಿಲ್ಲಿಸಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯವನ್ನು ಮಂಡಿಸಿದರು. ಶ್ರೀಗಳಾದ ಮುಹುಲಿಕರ್ ಪಾದುಭಾಯ್ ವಾಮಿನರು ನಿರ್ಣಯವನ್ನು ಬೆಂಬಲಿಸಿದರು. ನಿರ್ಣಯ ಸರ್ವಸಮ್ಮತದಿಂದ ಅಂಗೀಕೃತವಾಯಿತು.

(ಹಿಂದಿನ ಪುಟದಲ್ಲಿ ನೋಡಿರಿ)

ದಿವ್ಯವಾಣಿ

ಸಖದಲ್ಲಿ ಸ್ನೇಹಿತನನ್ನು ಅಳೆಯಬೇಡ : ನಿನಗೆ ಕಷ್ಟಬಂದಾಗ ನಿನ್ನ ಸ್ನೇಹಿತನ ಅಗ್ನಿಪರೀಕ್ಷೆ ; ಆಗಲೇ ಅವನ ಬೆಲೆಯ ನಿರ್ಧಾರ. — ಸ್ಯರಿಚ

ಮೈಸೂರು ಸಂಸ್ಥಾನದ ಮೇಲೆ ಕೇಂದ್ರದ ನಿಯಂತ್ರಣ

ನವದೆಹಲಿ— ಎ ಮತ್ತು ಬಿ ವರ್ಗದ ಸಂಸ್ಥಾನಗಳ ಆಡಳಿತದಲ್ಲಿರುವ ಭೇದವನ್ನು ರದ್ದುಗೊಳಿಸಬೇಕೆಂದು ಕಳೆದ ಏಐಸಿಸಿ ಅಧಿವೇಶನದಲ್ಲಿ ಮೈಸೂರು ಪ್ರಾಂತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಮಂಡಿಸಿದ್ದ ಸೂಚನೆಯು ವಿಚಾರವು ಕಾಂಗ್ರೆಸ್ ಕಾರ್ಯ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚೆಗೆ ಬರುವುದೆಂದು ತಿಳಿಯಬಂದಿದೆ : ಇದು ಯಾವರೀತಿಯಾದರೂ ಅನುಕೂಲ ವ್ಯವಸ್ಥೆಗೊಂಡರೆ ಮೈಸೂರಿನಂತಹ ಬ ವಿಭಾಗಕ್ಕೆ ಸೇರಿದ ಸಂಸ್ಥಾನಗಳ ಮೇಲೆ ಕೇಂದ್ರದ ನಿಯಂತ್ರಣ ಇರುವುದಿಲ್ಲವೆಂದು ತಿಳಿಯಬರುತ್ತದೆ.

—

ದೊಡ್ಡಳ್ಳಿ (ಸಂಸಿ)— ದೊಡ್ಡಳ್ಳಿ ಗಣಪತಿ ಹೆಗ್ಗಡೆ ಎಂಬಾತನು ಒಂದೇ ಸಲ ಎರಡು ಹುಲಿಗಳನ್ನು ಹೊಡೆದಪ್ಪಕ್ಕಾಗಿ ಸರಕಾರದವರು ಅವನಿಗೆ ೨೫೦ ರೂ. ಬಹುಮಾನ ಕೊಟ್ಟರು.

ಬೆಂಗಳೂರು—ಹೊಸದುರ್ಗ ತಾಲ್ಲೂಕು ಹಿರೇಕೆರೆ ಅಚ್ಚಕಟ್ಟಿನಲ್ಲಿ ಅಲ್ಪ ಮಳೆಯಿಂದ ಬೆಳೆ ಕಟ್ಟದ್ದಕ್ಕಾಗಿ ಕಂದಾಯದಲ್ಲಿ ಅರ್ಧ ಮಾಫ್ ಮಾಡಲಾಗಿದೆಯೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ

ಲಂಡನ್— ಪರ್ಷಿಯಾ ಎಣ್ಣೆ ವಿವಾದವು ಬ್ರಿಟಿಷ್ ಸರಕಾರಕ್ಕೂ ಸಂಬಂಧಿಸಿದ್ದೆಂದು ಬ್ರಿಟಿಷ್ ವಿದೇಶಾಂಗ ಮಂತ್ರಿ ಅಭಿಪ್ರಾಯ ವ್ಯಕ್ತಪಡಿಸಿರುವರು

ಬೊಂಬಾಯಿ— ಭಾರತದಲ್ಲಿ ನಿಜವಾದ ಪ್ರಜಾಪ್ರಭುತ್ವ ಸ್ಥಾಪನೆಯೇ ತಮ್ಮ ಗುರಿಯೆಂದು ಭಾರತದ ಕಮ್ಯುನಿಸ್ಟ್ ಪಾರ್ಟಿ ಕೇಂದ್ರ ಸಮಿತಿ ತಿಳಿಸಿದೆ.

ಕಾಂಗ್ರೆಸ್ ಬಿಟ್ಟ ಆಚಾರ್ಯ ಕೃಪಾಲಿ ನಿಯೋಗದವರನ್ನು ಸಮಾಜವಾದಿ ಜಯಪ್ರಕಾಶನಾರಾಯಣರು ನಿನ್ನೆ ಕಂಡಿದ್ದರೆಂದು ತಿಳಿದುಬಂದಿದೆ

ಸಚಿವರ ಹೇಳಿಕೆ

ಭಾರತ ಪಾರ್ಲಿಮೆಂಟಿನಲ್ಲಿ ಆಹಾರ ಶಾಖೆಯ ಉಪಸಚಿವರಾದ ಶ್ರೀ ಎಂ ತಿರುಮಲರಾಯರು ನಿನ್ನೆ ಹೇಳಿಕೆ ಇತ್ತು, ಭಾರತದ ಆಹಾರ ಪರಿಸ್ಥಿತಿ ಸ್ವಲ್ಪ ಸ್ವಲ್ಪ ಭರವಸೆಯುದಾದ ಹಾಗಿದೆ ಆದರೆ ನಿಗದಿಯಾದ ಸುಧಾರಣೆ ಆಗುವ ವರಿಗೆ ಖೋತ ಮಾಡಿರುವ ಪಡಿತರವನ್ನು ಹೆಚ್ಚಿಸಲಾಗುವುದಿಲ್ಲ ಎಂದರು.

—

ಬೆಂಗಳೂರು— ಕಬ್ಬನ್‌ಪಾರ್ಕ್ ವಸ್ತು ಪ್ರದರ್ಶನದವ್ಯರು ರಾಷ್ಟ್ರಪತಿ ರಾಜೇಂದ್ರ ಪ್ರಸಾದರಿಗೆ ಕೊಟ್ಟ ಪ್ರಥಮ ಕಾಣಿಕೆ 25 ಸಾವಿರ ರೂ ಚೆಕ್ಕು ಬ್ಯಾಂಕಿಗೆ ಬಂದಾಗ ಅಲ್ಲಿ 22 ಸಾವಿರ ಮಾತ್ರ ಇತ್ತೆಂದೂ. ವಸ್ತುಪ್ರದರ್ಶನ ಸಮಿತಿ ಅಧ್ಯಕ್ಷರೇ 3 ಸಾವಿರ ಸಾಲವಾಗಿ ಕೊಟ್ಟು ಚಕ್ಕಿನ ಹಣ ಸಂದಾಯವಾಗುವಂತೆ ಮಾಡಿದರೆಂದು ಕಾರ್ಯದರ್ಶಿ ಸಂಜಪ್ಪನವರು ವಿಚಾರಣಾ ಸಮಿತಿ ಮುಂದೆ ಕೊಟ್ಟ ಸಾಕ್ಷ್ಯದಲ್ಲಿ ತಿಳಿಸಿದರು.

ಪ್ರಪಂಚದಲ್ಲಿ ಹತ್ತುಮಂದಿ ಸುಂದರ ಸುಂದರಿಯರನ್ನು ಆರಿಸಲಾಗಿದೆ ಅವ್ಯೆಕಿ ಜಯಪುರದ ರಾಜರಾಣಿಯರು ಇರುವರು.

ನವದೆಹಲಿ— ಸಿಂಗಪುರದಲ್ಲಿ ವಿಪರೀತವಾಗಿ ಭಾರತದ ಒಟ್ಟೆ ಬಿದ್ದಿದೆಯೆಂದೂ, ಅಲ್ಲಿಂದ ಹಾಂಕಾಂಗ್ ಮತ್ತು ಇತರ ರಾಷ್ಟ್ರಗಳಿಗೆ ಕಳಿಸಲು ಸರ್ಕಾರ ಪ್ರತಿಬಂಧಿಸಿದೆಯೆಂದೂ ಪಾರ್ಲಿಮೆಂಟಿನಲ್ಲಿ ಸರಬರಾಜು ಸಚಿವರು ತಿಳಿಸಿದರು.

ರೆಡ್ಡಿಗಳಿಗೂ ಬರಬಹುದು

ಮದರಾಸು ಮಂತ್ರಿ ಮುಖ್ಯರಿಗೆ ಬರೆದಂತೆ ಬೊಂಬಾಯಿ ಮುಖ್ಯ ಮಂತ್ರಿ ಶ್ರೀ ಖೇರರಿಗೂ ಪತ್ರ ಬರದು ಆಹಾರ ಖಾತೆ ವಹಿಸಿಕೊಳ್ಳುವಂತೆ ಪಂ|| ನೆಹರು ಸೂಚಿಸಿರುವರು ನನ್ನು ಶ್ರೀ ರೆಡ್ಡಿಗಳಿಗೂ ಇದೇ ಸೂಚನೆ ಬರಬಹುದು.

—

ಚುನಾವಣೆ

ಕಾಶ್ಮೀರ ಪ್ರಾಂತ್ಯದಲ್ಲಿ ಸೆಪ್ಟಂಬರ್ 21 ನೇ ತಾ|| ಅಲ್ಲಿನ ರಾಜ್ಯಾಂಗ ಸಭೆಯ ಚುನಾವಣೆ ನಡೆಯುವದು ಜಾಮುವಿನಲ್ಲಿ ಸೆಪ್ಟಂಬರ್ 30 ನೇ ಜರುಗುವದು

ಅಧ್ಯಕ್ಷರು ಪರಿಣಾಮಕಾರಿಯಾದ ಭಾಷಣವನ್ನು ಮಾಡಿದ ನಂತರ ಎರಡನೇ ದಿನದ ಕಾರ್ಯಕ್ರಮಗಳು ಮುಕ್ತಾಯವಾದುವು

ಶ್ರೀ ಮಹಾತ್ಮಾಜೀ ರಾಮಸುಬೋಧಾಶ್ರಮಜೀಯವರ ಅಧ್ಯಕ್ಷತೆಯಲ್ಲಿ ಮೂರನೇ ದಿವಸದ ಕಾರ್ಯಾರಂಭವಾದವು.

ಅಹಮದಾಬಾದಿನ ಸುಪ್ರಸಿದ್ಧ ವಕೀಲರಾದ ಶ್ರೀ ವಾವ ನದಾಸ್ ಥೋಲಕೀಯವರು, ಧಾರ್ಮಿಕ ಸಂಸ್ಥೆಗಳಿಗೆ ಬೊಂಬಾಯಿ ಪಬ್ಲಿಕ್ ಟ್ರಸ್ಟ್ ಕಾಯಿದೆಯನ್ನು ಜಾರಿಮಾಡಕೂಡದೆಂದು ನಿರ್ಣಯವಿಟ್ಟರು. ಮೈಹರಾನದ ಶ್ರೀ ರಾವಲಾಲ್ ವೈದ್ಯರು ನಿರ್ಣಯವನ್ನು ಬೆಂಬಲಿಸಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಶ್ರೀಮತಿ ಗಂಗಾಬೆನ್ ಪಟೇಲರು ಧಾನ್ಯ ಹಾಗೂ ಬಟ್ಟೆಯ ಮೇಲಿನ ನಿಯಂತ್ರಣವನ್ನು ಈ ಕೂಡಲೇ ಒದ್ದುಗೊಳಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು ; ಶ್ರೀ ಶಾಸ್ತ್ರಿ ಮಂಡಾಲ್‌ಜೀಯವರಿಂದ ನಿರ್ಣಯವು ಬೆಂಬಲಿಸಲ್ಪಟ್ಟು ಸರ್ವಾನುಮತದಿಂದ ಅಂಗೀಕೃತವಾಯಿತು.

ಸೇಟ್ ಮುಲ್‌ಚಂದ್ ರಾಜಾವರು ಹಿಂದೂಸಂಸ್ಕೃತಿ ರಕ್ಷಣಾ ನಿರ್ಣಯವನ್ನು ಮಂಡಿಸಿದರು : ಶ್ರೀ ಶಾಸ್ತ್ರಿ ಚಂದ್ರಶೇಖರಜೀಯವರು ನಿರ್ಣಯಕ್ಕೆ ಬೆಂಬಲವಿತ್ತರು : ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಶ್ರೀ ವಾಸುದೇವಾಚಾರ್ಯರು ಧರ್ಮಾಚಾರ್ಯರುಗಳ ಸಹಕಾರಕ್ಕಾಗಿ ಧಕ್ಕೆಪುರಸ್ಸರ ನಿರ್ಣಯವನ್ನು ಮಂಡಿಸಿದರು ; ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಶ್ರೀ ಗಂಗೇಶ್ವರಾನಂದಜೀಯವರು ಹಿಂದೂಮತದ ಹಾಗೂ ಧರ್ಮಗುರುಗಳ ಕರ್ತವ್ಯವನ್ನು ನಿವೇದಿಸಿದರು.

ಶ್ರೀ ದ್ವಾರಕಾ ಜಗದ್ಗುರುಗಳು, ಈ ನೂರು ದಿನಸೆಗಳ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳನ್ನು ಕುರಿತುಸಂಹರಿಸಿ, ಸಮ್ಮೇಳನ ಸಮಾರೋಪ ಭಾಷಣವನ್ನು ಮಾಡಿದರು.

ಶ್ರೀ ಮಹಾತ್ಮಾಜೀ ರಾಮಸುಬೋಧಜೀಯವರು ವಂದನಾರ್ಪಣೆ ಮಾಡಿದರು.

ಅಖಿಲ ಭಾರತ ಹಿಂದೂಧರ್ಮ ಸಮ್ಮೇಳನವು ಯಶಸ್ವಿಯಾಗಿ ಸಮಾಪ್ತವಾಯಿತು.

ಶ್ರೀ ದ್ವಾರಕಾ ಜಗದ್ಗುರುಗಳವರು ಸಧ್ಯದಲ್ಲೇ ಸಿರೋಹಿ ಮತ್ತು ಪಾಲೆಂಪುರ್‌ಗೆ ಸಂದರ್ಶನವೀಯುವರು.

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳನ್ನು,

ಮೈಸೂರು

- ದುಂಡು,
- ಚೌಕೋನ,
- ಸರಳುಗಳು,
- ಮೊಳೆಗಂಬಗಳು
- ಬೇಲುಕಟ್ಟಿಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ಉಡ್‌ಲಾಂಡ್

ಶೀಘ್ರ

ಆಕರ್ಷಣ 3 ನೇ ವಾರ

ನಿರೂಪರಾಯ್, ತ್ರಿಲೋಕಕಪೂರ್
ರಾಂಸಿಂಗ್, ದುರ್ಗಾಖೋಟೆ
ಪಾತ್ರವಹಿಸಿರುವ ಅತ್ಯದ್ಭುತ ಆಕರ್ಷಣೀಯ, ಪ್ರಣಯಮೋಹನ

ಚಿತ್ರರತ್ನ (ಹಿಂದಿ)

ಭೀಮಸೇನ್

BHIMSEN

ಪ್ರತಿದಿನ 2 ಪ್ರದರ್ಶನಗಳು

— ಪ್ರಣಯಿನಿ ನಿನೋದ್ಕೆ —

ಉನ್ಮಾದ ಪೆದ್ರೋ

ಅತಿ ಸಾಹಸಮಯ ಹಿಂದಿ ಚಿತ್ರ

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—

ನ್ಯೂ ಅಪೇರಾ ಟಾಕೀಸ್
ಮೈಸೂರು

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

Edited, Printed and Published by M. S. Krishna Rao, at the Satyavadi Press Chamrajpuram Mysore

ನೈಸರ್ಗಿಕ ಶಿವರಂಪೇಟೆ
ಈವಿನಿಂಗ್ ಬಜಾರ್‌ನಲ್ಲಿರುವ

ಜಯಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್

ನಲ್ಲಿ ಮುದ್ರಣಕಲಸಗಳು ಸುಂದರವಾಗಿ ಯೂ, ಸಕಾಲದಲ್ಲೂ, ಸುಲಭ ಬೆಲೆಯಲ್ಲೂ ಮಾಡಿಕೊಡಲಾಗುವುದೆಂಬುದು ನಿಮ್ಮ ಜ್ಞಾಪಕದಲ್ಲಿರಲಿ

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ

- ಪ ಬೋ ಧ -

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

ರಣಜಿತ್

ವೈಭವ 4 ನೇ ವಾರ

ಜೆಹನಾ, ಯಾಕೂಬ್, ಪ್ರೇಮನಾಥ್
ಗೋಪ್ ಪಾತ್ರವಹಿಸಿರುವ

ನಗಾಯಿ

ಪ್ರತಿದಿನ 3 ಆಟಗಳು

8-6-51 ರಿಂದ

ರಾಜರಾಣಿ

ಪಾತ್ರ— ಮಾನಾ, ರೆಹನಾ, ಶಶಿಕಲಾ